**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ:2034/2021**

**ಸಾಕ್ಷಿಯನ್ನು ದಿಃ 30.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಜಯಣ್ಣ | ಸಿಡಬ್ಲ್ಯೂ:6 | ಪಿಡಬ್ಲ್ಯೂ:4 |
| ತಂದೆಯ ಹೆಸರು | ಪುಟ್ಟಯ್ಯ | | |
| ವಯಸ್ಸು | 40 ವರ್ಷ | | |
| ಉದ್ಯೋಗ | ಕೂಲಿ ಕೆಲಸ | | |
| ವಾಸಸ್ಥಳ | ಸಿದ್ದನಕೊಪ್ಪಲು, ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಸಾಕ್ಷಿಗೆ ಒಂದು ದಾಖಲೆ ತೋರಿಸಿಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಅದನ್ನು ನಿಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 2(ಎ) ಎಂದು ಗುರುತಿಸಲಾಯಿತು. ಇನ್ನೆರೆಡು ದಾಖಲೆಗಳು ತೋರಿಸಿದ್ದು, ಅವುಗಳನು ಸೀಜರ್ ಮಹಜರ್ ಆಗಿದ್ದು, ಅವುಗಳು ನಿಪಿ.3 ಮತ್ತು 4 ಎಂದು ಈಗಾಗಲೆ ಗುರುತಿಸಿಲಾಗಿದೆ. ಸದರಿ ಸಹಿಗಳನ್ನು ಹುಣಸೂರು ಸರ್ಕಾರಿ ಆಸ್ಪತ್ರೆಯ ಹತ್ತಿರ ಇರುವ ಪೊಲೀಸ್ ಠಾಣೆಯಲ್ಲಿ ಈಗ್ಗೆ 5-6 ವರ್ಷಗಳ ಹಿಂದೆ ಮಾಡಿರುತ್ತೇನೆ. ಯಾವ ವಿಚಾರಕ್ಕೆ ಎಂದು ಸದರಿ ಸಹಿ ಮಾಡಿಸುತ್ತಿದ್ದಾರೆ ಎಂದು ತಿಳಿಸಲಿಲ್ಲ. ನಾನು ಆಸ್ಪತ್ರಗೆಂದು ಬಂದಾಗ ಪರಿಚಯ ಇದ್ದ ಪೊಲಿಸರು ಸಹಿ ಮಾಡಿ ಎಂದು ಹೇಳಿದ ಮೇರೆಗೆ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೆ ವಸ್ತುಗಳನ್ನು ಅಮಾನತ್ತು ಪಡಿಸಿಕೊಳ್ಳಲಿಲ್ಲ. ಆಗ ಸಮಯ ಮಧ್ಯಾಹ್ನ 2.00 ರಿಂದ 3.00 ಗಂಟೆ ಆಗಿತ್ತು.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲು ಸಸಅ ರವರಿಂದಃ-</u>**

ದಿಃ 03.03.2018 ರಂದು ಬೆಳಿಗ್ಗೆ 9.30 ರಿಂದ 10.30 ಗಂಟೆ ಸಮಯದಲ್ಲಿ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಆರೋಪಿಯಿಂದ 2 ಮೊಬೈಲ್ ಗಳನ್ನು ಸೀಜ್ ಮಾಡಿಕೊಳ್ಳುವ ಸಮಯದಲ್ಲಿ ನಾನು, ಆರೋಪಿ ಯೋಗೇಶ್ ಚೌಹಾನ್ ಮತ್ತು ಮಹದೇವಸ್ವಾಮಿ ಹಾಜರಿದ್ದು , ನಿಪಿ. 3 ರ ದಾಖಲೆಗೆ ಸಹಿ ಮಾಡಿದ್ದೆವು ಎಂದರೆ ಸರಿಯಲ್ಲ. ದಿಃ 28.02.2017 ರಂದು ಕೆಂಬ್ರಿಜ್ಡ್ ವಿದ್ಯಾಸಂಸ್ಥೆ ಕಛೇರಿಯಲ್ಲಿ ಒಂದು ಹಾರ್ಡ ಡಿಸ್ಕ್ ಅನ್ನು ಸೀಜ್ ಮಾಡಿಕೊಂಡಿದ್ದು, ಆ ಸಮಯದಲ್ಲಿ ಹಾಜರಿದ್ದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆಗ ಸಮಯ 3.00 ರಿಂದ 4.30 ಗಂಟೆ ಆಗಿತ್ತು ಎಂದರೆ ಸರಿಯಲ್ಲ. ಹಾಗೆ ಸಹಿ ಮಾಡಿದಾಗ ನನ್ನ ಜೊತೆ ಮಹದೇವಸ್ವಾಮಿ ಮತ್ತು ಶಾಲೆಯ ಪ್ರಾಂಶುಪಾಲರು ಇದ್ದರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮೊಬೈಲ್ ಹಾಗೂ ಹಾರ್ಡ ಡಿಸ್ಕ ಅನ್ನು ಅಮಾನತ್ತು ಪಡಿಸಿಕೊಂಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮೊಬೈಲ್ ಗಳನ್ನು ಸೀಲ್ ಆಗಿದ್ದನ್ನು ತೆರೆದು ತೋರಿಸಿದ್ದನ್ನು ನೋಡಿ ಸಾಕ್ಷಿ ಒಪ್ಪಿರುವುದಿಲ್ಲ. ದಿಃ 03.03.2018 ರಂದು ಹುಣಸೂರು ಪಟ್ಟಣ ಮಾರುತಿ ಬಡಾವಣೆಯಲ್ಲಿ ಇರುವಂತಹ ಕೆಂಬ್ರಿಜ್ಡ್ ವಿದ್ಯಾಸಂಸ್ಥೆ ಹತ್ತಿರ ನಿಪಿ. 2 ಸ್ಥಳ ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆಗ ಸಮಯ ಮಧ್ಯಾಹ್ನ 3.00 ರಿಂದ 5.30 ಆಗಿತ್ತು ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಎಸ್.ವೈ ವಕೀಲರಿಂದಃ</u>**

ಇರುವುದಿಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.ಹುಣಸೂರು.